ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮುಂಡರಗಿ

| | | | | |
|---|---|---|---|---|
| | ಓ ಎಸ್ ನಂ. 176/2023 | | | |
| | ವಾದಿ | 1 | ಪಿ.ಡಬ್ಲೂಃ | 1 |
| | ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 18.03.2025 | | | |
| ಸಾಕ್ಷಿದಾರರ ಹೆಸರುಃ | ದಾದಪೀರ್ ಕೊಂಬಳಿ | | | |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಶ್ರೀ ಎ ಕೆ ಜೆ ವಕೀಲರಿಂದ**

1. ಪ್ರತಿವಾದಿ ನನ್ನ ತಂದೆ. ನನ್ನ ತಂದೆಗೆ ಒಟ್ಟು 5 ಜನ ಗಂಡು ಮಕ್ಕಳು ಮತ್ತು 5 ಜನ ಹೆಣ್ಣು ಮಕ್ಕಳು ಇರುತ್ತೇವೆ. ನನ್ನ ತಂದೆ ತಾಯಿ ಜೀವಂತ ಇದ್ದಾರೆ ಎಂದರೆ ಸರಿ. ನಾನು ಪದವಿದರನಿರುತ್ತೇನೆ. ನನಗೆ ಓದಲು, ಬರೆಯಲು ಮತ್ತು ವ್ಯವಹಾರ ಜ್ಞಾನ ಇದೆ ಎಂದರೆ ಸರಿ. ನಮ್ಮ ಮನೆತನಕ್ಕೆ 6 ಎಕರೆ 28 ಗುಂಟೆ ಆಸ್ತಿ ಇದೆ. ಮೊದಲಿಗೆ ಸದರಿ ಆಸ್ತಿ ನಮ್ಮ ತಂದೆಯ ಹೆಸರಿಗೆ ಇತ್ತು ಎಂದರೆ ಸರಿ. ಸದರಿ ಜಮೀನನ್ನು ನನ್ನ ತಂದೆ ಸಾಗುವಳಿ ಮಾಡಿ ನಮ್ಮ ಮದುವೆಯನ್ನು ಮಾಡಿದ್ದರು ಎಂದರೆ ಸರಿ.

2. ನನ್ನ ತಂದೆ ಮನೆತನದ ಅಡಚಣೆಗೋಸ್ಕರ ಶರತ್ ಬಸವರಾಜ ಮೇಟಿ ಎಂಬುವವರಿಗೆ ದಾವಾ ಆಸ್ತಿ ಸರ್ವೆ ನಂ 8/2ಬ ಅನ್ನು 3 ವರ್ಷದ ಒಳಗಾಗಿ ತಾವು ಮರಳಿ ಪಡೆಯುವುದಾಗಿ ಅವರಿಂದ ಹಣ ಪಡೆದುಕೊಂಡು ಮಾರಾಟ ಮಾಡಿದ್ದರು ಎಂದರೆ ಸರಿ. ಖರೀದಿ ನೀಡಿದ್ದರು ಸಹ ನನ್ನ ತಂದೆಯೇ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ಮರಳಿ ಖರೀದಿ ಪಡೆಯಲು ನನ್ನ ತಂದೆ ಪ್ರಯತ್ನಿಸಿದ್ದರು ಎಂದರೆ ಸರಿ. ನನ್ನ ತಂದೆಯ ಹೆಸರಿಗೆ ಬೇರೆ ಸಾಲ ಇದಿದ್ದರಿಂದ ನನ್ನ ತಂದೆಯೇ ನನ್ನ ಹೆಸರಿಗೆ ಸದರಿ ಜಮೀನನ್ನು ಖರೀದಿಸಿದ್ದರು ಎಂದರೆ ಸಾಕ್ಷಿಯು ನಾನು ನನ್ನ ಹೆಸರಿಗೆ ಸಾಲ ತೆಗೆದುಕೊಂಡು ಖರೀದಿಸಿರುತ್ತೇನೆ ಅಂತಾ ನುಡಿಯುತ್ತಾರೆ. ಸದರಿ ಸಾಲವನ್ನು ನನ್ನ ತಂದೆಯೇ ಮುಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ.

3. 1 ನೇ ಪ್ರತಿವಾದಿಗೆ ನಾನು ಖರೀದಿ ಹಿಡಿದ ಜಮೀನನ್ನು ಭಕ್ಷಿಸು ಮಾಡಿದ್ದು, ಸಾಕ್ಷಿಯು ಮುಂದುವರೆದು ನನಗೆ ಮನೆತನದ ಆಸ್ತಿಗಳಲ್ಲಿ ಪಾಲು ವಿಭಾಗ ಕೊಡುವುದಾಗಿ ತಿಳಿಸಿ ಸದರಿ ಭಕ್ಷಿಸು ಪತ್ರ ಮಾಡಿಸಿಕೊಂಡಿರುವುದಾಗಿ ನುಡಿಯುತ್ತಾರೆ. ಭಕ್ಷಿಸು ಆದ ನಂತರ ನನ್ನ ತಂದೆ ಮಾಲೀಕರಾಗಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಭಕ್ಷಿಸು ಸುಳ್ಳು ಹೇಳಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈಗ ನನ್ನ ತಂದೆ ಸದರಿ ಜಮೀನಿನಲ್ಲಿ ಭತ್ತ ಬೆಳೆಸಿರುತ್ತಾರೆ ಎಂದರೆ ಸಾಕ್ಷಿ ನಾನು ಬೆಳೆಸಿರುವುದಾಗಿ ನುಡಿಯುತ್ತಾರೆ.

4. ಭಕ್ಷಿಸು ಪತ್ರ ನೋಂದು ಆಗಿದೆ ಎಂದರೆ ಸರಿ. ಸದರಿ ಕಾಲಕ್ಕೆ ಪೋಟೋ ತೆಗೆದಿದ್ದರು ಎಂದರೆ ಸರಿ. ನಾನು ಸಹಿ ಹಾಕುವ ಮೊದಲು ಸದರಿ ಭಕ್ಷಿಸು ಪತ್ರವನ್ನು ಓದಿರಲಿಲ್ಲ. ಯಾಕೆ ಓದದೆ ಸಹಿ ಮಾಡಿರುತ್ತೀರಿ

<table>
<tr><td rowspan="3"></td><td colspan="4">ಓ ಎಸ್ ನಂ. 176/2023</td></tr>
<tr><td>ವಾದಿ</td><td>1</td><td>ಪಿ.ಡಬ್ಲ್ಯೂಃ</td><td>1</td></tr>
<tr><td colspan="4">ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 18.03.2025</td></tr>
<tr><td>ಸಾಕ್ಷಿದಾರರ ಹೆಸರುಃ</td><td colspan="4">ದಾದಪೀರ್ ಕೊಂಬಳಿ</td></tr>
</table>

ಎಂದರೆ ಸಾಕ್ಷಿಯು ನನಗೆ ಮತ್ತು ಪ್ರತಿವಾದಿಗೆ ಬಹಳ ವರ್ಷಗಳಿಂದ ಸಂಬಂದ ಸರಿ ಇರದ ಕಾರಣ ಹಾಗೂ ಮನೆತನದ ಆಸ್ತಿಗಳಲ್ಲಿ ಪಾಲು ವಾಟ್ನಿ ಆಗುವ ಕುರಿತು ಹೇಳಿದ್ದರಿಂದ ನಾನು ಓದದೆ ಸಹಿ ಮಾಡಿರುವುದಾಗಿ ನುಡಿಯುತ್ತಾರೆ.

5. ನಮ್ಮ ಮನೆತನದ ಆಸ್ತಿಗಳಲ್ಲಿ ಈವರೆಗೂ ಪಾಲು ವಿಭಾಗ ಆಗಿಲ್ಲ. ದಾವಾ ಆಸ್ತಿ ನೀರಾವರಿ ಜಮೀನು ಎಂದರೆ ಸರಿ. ಸದರಿ ಜಮೀನಿನ ಮಾರುಕಟ್ಟೆ ಬೆಲೆ ಗೊತ್ತಿಲ್ಲ. ಪ್ರತಿ ಎಕರೆಗೆ 15–20 ಲಕ್ಷ ಇದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಈಗ ದಾವಾ ಆಸ್ತಿಯ ಬೆಲೆ ಅಂದಾಜು 80 ಲಕ್ಷ ಆಗುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಮಾರುಕಟ್ಟೆ ಬೆಲೆಯನ್ನು ತಪ್ಪಾಗಿ ತೋರಿಸಿದ್ದೇನೆ ಎಂದರೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

6. ದಾವೆ ದಾಖಲಿಸುವ ಮೊದಲು ಪ್ರತಿವಾದಿಗೆ ನೋಟಿಸ್ ನೀಡಿದ್ದೆ ಎಂದರೆ ಸರಿ. ಅದಕ್ಕೆ ನನ್ನ ತಂದೆ ಉತ್ತರ ನೀಡಿದ್ದಾರೆ ಎಂದರೆ ಸರಿ. ಪ್ರತಿವಾದಿ ಭಕ್ಷಿಸು ಪತ್ರವನ್ನು ಮೋಸದಿಂದ ಮಾಡಿಸಿಕೊಂಡಿರುವ ಕುರಿತು ಠಾಣೆಯಲ್ಲಿ ದೂರು ದಾಖಲಿಸಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಅನುಮತಿಸಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ

ಮುಂಡರಗಿ.